# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 42/2018

(ಪ್ರಾಸಾ-1 ಚಾಸಾ-1 )
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 23.06.2022.

| | | |
|---|---|---|
| ಸಾಕ್ಷಿದಾರರ ಹೆಸರು | - | ಶಿವಕುಮಾರ್, |
| ತಂದೆ ಹೆಸರು | - | ಕೃಷ್ಣಪ್ಪ, |
| ವಯಸ್ಸು | - | 39 ವರ್ಷ, |
| ಉದ್ಯೋಗ | - | ಎಲೆಕ್ಟ್ರೀಷಿಯನ್, |
| ವಾಸ | - | ಕೆ. ಮಲ್ಲಸಂದ್ರ. |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರವರಿಂದಃ

ನಾನು ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಜಾತಿಯವನಿರುತ್ತೇನೆ. ಚಾಸಾ-2 ಮತ್ತು 3 ಇವರ ಪರಿಚಯ ಇದೆ. ಅವರು ಸಹ ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಜಾತಿಯವರು. ಮೃತ ಪೃಥ್ವಿರಾಜ್ ನನ್ನ ಮಾವನ ಮಗ. ಆತ ತೀರಿಕೊಂಡಾಗ ಆತನಿಗೆ 25 ವರ್ಷ ವಯಸ್ಸು. ಮೃತ ಪೃಥ್ವಿರಾಜ್ ಉಾರಲ್ಲಿ ಡ್ರೈವಿಂಗ್ ಕೆಲಸ ಮಾಡುತ್ತಿದ್ದ.

ಮುಂದುವರಿದ ಮುಖ್ಯ ವಿಚಾರಣೆಗೆ ಮಾನ್ಯ ಎಸ್ ಪಿ ಪಿ ರವರು ಸಮಯ ಕೋರುತ್ತಾರೆ. ಆದ್ದರಿಂದ ಮುಂದೂಡಲಾಯಿತು.

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸಿದ್ದೇನೆ)
ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

<u>ಸಾಕ್ಷಿಯನ್ನು ದಿಃ **23.01.2023** ರಂದು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

2. ಚಾಸಾ-2 ಮತ್ತು 3 ನನ್ನ ಸಂಬಂಧಿಕರು. ಅವರು ಸಹ ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಜಾತಿಯವರು. ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇದೆ. 1 ನೇ ಆರೋಪಿ ಬ್ರಾಹ್ಮಣರು. 2 ಮತ್ತು 3 ನೇ ಆರೋಪಿತರು ಪರಿಶಿಷ್ಟ ಜಾತಿಯ ಆದಿಕರ್ನಾಟಕ ಜಾತಿಯವರು. 2 ಮತ್ತು 3 ನೇ ಆರೋಪಿತರು 1 ನೇ ಆರೋಪಿಯ ಕೆಳಗೆ ಕಾಂಟ್ರಕ್ಟ್ ಕೆಲಸ ಮಾಡುತ್ತಾರೆ. ಜತ್ತಿ ದ್ವಾರಕೀಮಯ ವಿಲ್ಲಾಸ್ ನಲ್ಲಿ ಗಾರ್ಡನ್ ಕ್ಲೀನ್ ಮಾಡಲೆಂದು ಮೃತ ಪೃಥ್ವಿರಾಜ್ ನನ್ನು ದಿಃ24.05.2017 ರಂದು 2 ಮತ್ತು 3 ನೇ ಆರೋಪಿತರು ಕರೆದುಕೊಂಡು ಹೋಗಿ ಪಿಟ್ ಕ್ಲೀನ್ ಮಾಡುವ ಕೆಲಸಕ್ಕೆ ತೊಡಗಿಸಿದ್ದಾರೆ. ಆ ವಿಲ್ಲಾ 1 ನೇ ಆರೋಪಿಯದ್ದು ಇದೆ. ಸಂಜೆ 4 ಘಂಟೆ ಸಮಯಕ್ಕೆ ಪಿಟ್ ಮಾಡುವ ಕೆಲಸಕ್ಕೆ ಪೃಥ್ವಿರಾಜ್, ಚಾಸಾ-3 ರಾಜು ಮತ್ತು ಚಾಸಾ-2 ದಿನೇಶ್ ನನ್ನು ತೊಡಗಿಸಿದ್ದಾರೆ. ಆಗ ರಾಜುಗೆ 17 ವರ್ಷ ವಯಸ್ಸು ಮತ್ತು ದಿನೇಶ್ ಗೆ 21 ವರ್ಷ ವಯಸ್ಸು. ಪೃಥ್ವಿರಾಜ್ ಮತ್ತು ಚಾಸಾ-3 ರಾಜು ಪಿಟ್ ಒಳಗೆ ಇಳಿದಿದ್ದಾರೆ. ಪೃಥ್ವಿರಾಜ್ ಉಸಿರುಗಟ್ಟಿ ತೀರಿಕೊಂಡಿದ್ದಾರೆ. ಚಾಸಾ-3 ಸಹ ಉಸಿರುಗಟ್ಟಿ ಕೋಮಾದಲ್ಲಿದ್ದರು. 4-5 ದಿವಸದ ನಂತರ ಆತನಿಗೆ ಪ್ರಜ್ಞೆ ಬಂತು. ಪೃಥ್ವಿರಾಜ್ ಒಂದು ವಾರ ಕೋಮಾದಲ್ಲಿದ್ದು ನಂತರ ತೀರಿಕೊಂಡ. ಮೃತ ಮತ್ತು ಚಾಸಾ-3 ಇಬ್ಬರನ್ನು ಕೊಲೊಂಬಿಯಾ ಏಷಿಯಾ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಚಾಸಾ-2 ಪಿಟ್ ಒಳಗೆ ಇಳಿದಿರಲಿಲ್ಲ.

3. ಚಾಸಾ-2 ಇವರು ನನಗೆ ಫೋನ್ ಮಾಡಿ ಮೃತನಿಗೂ ಮತ್ತು ಚಾಸಾ-3 ಈತನಿಗೆ ಪಿಟ್ ನಲ್ಲಿ ಇಳಿದಿದ್ದಕ್ಕೆ ತೊಂದರೆಯಾಗಿದೆ ಎಂದು ತಿಳಿಸಿದ. ನಾನು ವಿಲ್ಲಾ ಹತ್ತಿರ ಹೋಗುವುದರೊಳಗೆ ಮೃತ ಮತ್ತು ಚಾಸಾ-3 ಇವರನ್ನು ಕೊಲೊಂಬಿಯಾ ಏಷಿಯಾ ಆಸ್ಪತ್ರೆಗೆ ದಾಖಲಿಸಿದ್ದರು. ನಾನು ಆಸ್ಪತ್ರೆಗೆ ಹೋದೆ. ಆಗ ಅವರಿಬ್ಬರೂ

ಕೋಮಾದಲ್ಲಿದ್ದರು. ನಾನು ಮರುದಿನ ಪೋಲಿಸ್ ಠಾಣೆಗೆ ಹೋಗಿ ಫಿರ್ಯಾದಿಯನ್ನು ನೀಡಿದೆ.

(ಮೂಲ ಫಿರ್ಯಾದಿ ಮತ್ತು ಎಫ್ ಐ ಆರ್ ಇವು 2 ನೇ ಹೆಚ್ಚುವರಿ ಸಿಜೆಎಂ ನ್ಯಾಯಾಲಯದಲ್ಲಿ ಇರುವುದಾಗಿ ಮಾನ್ಯ ಎಸ್ ಪಿ ಪಿ ರವರು ತಿಳಿಸಿದ್ದರಿಂದ ಅವುಗಳನ್ನು ತರಿಸುವಂತೆ ಪೋಲಿಸ್ ಸಿಬ್ಬಂದಿಗೆ ಆದೇಶ ನೀಡಿ ಮುಖ್ಯ ವಿಚಾರಣೆಯನ್ನು ಮಧ್ಯಾಹ್ನದವರೆಗೆ ಮುಂದೂಡಲಾಯಿತು).

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**ಸಾಕ್ಷಿಗೆ ಮಧ್ಯಾಹ್ನ ಪ್ರಮಾಣ ವಚನ ಭೋದಿಸಲಾಯಿತು**

ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

4. ಈಗ ತೋರಿಸಲಾದ ದಾಖಲೆ ನಾನು ನೀಡಿದ ಫಿರ್ಯಾದಿ ಇದೆ. ಅದನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-1(ಎ) ಎಂದು ಗುರ್ತಿಸಲಾಯಿತು. ದೂರು ನೀಡಿದ ಮಧ್ಯಾಹ್ನ ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿ ಅಲ್ಲಿ ನನ್ನ ಸಮಕ್ಷಮ ಮಹಜರ್ ಅನ್ನು ಪೋಲಿಸರು ಮಾಡಿದ್ದಾರೆ. ಈಗ ತೋರಿಸಲಾದ ದಾಖಲೆ ಸದರಿ ಮಹಜರ್ ಇದೆ. ಅದನ್ನು ನಿಪಿ-2 ಎಂದು ಮತ್ತು ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-2(ಎ) ಎಂದು ಗುರ್ತಿಸಲಾಯಿತು. ಮಹಜರ್ ಮಾಡಿದ ಸ್ಥಳ ಜತ್ತಿ ದ್ವಾರಕಮಯಿ ವಿಲ್ಲಾದ ಪಿಟ್ ಬಳಿ ಇದೆ. ಸದರಿ ಪಿಟ್ ಸುಮಾರು 20 ಅಡಿ ಆಳ ಇದೆ.

ಸ್ಥಳದಲ್ಲಿ ಒಂದು ಬಕೇಟ್, ಹಗ್ಗ, ಚಪ್ಪಲಿ, ಒಂದು ಅಂಡರ್ ವೇರ್, ಪಿಟ್ ಒಳಗೆ 20 ಅಡಿ ಆಳದ ಏಣಿ ಇತ್ತು. ಬಕೇಟ್, ಚಪ್ಪಲಿ, ಹಗ್ಗ ಇವುಗಳನ್ನು ಸಾಕ್ಷಿದಾರರು ನೋಡಿ ಗುರ್ತಿಸುತ್ತಾರೆ. ಅವುಗಳನ್ನು ಈಗಾಗಲೇ ಮು.ಮಾ-1 ರಿಂದ 3 ಎಂದು ಗುರ್ತಿಸಲಾಗಿದೆ. ಅಂಡರ್ ವೇರ್ ಅನ್ನು ಸಾಕ್ಷಿದಾರರು ಗುರ್ತಿಸಿದ್ದು ಅದನ್ನು ಮು.ಮಾ-4 ಎಂದು ಗುರ್ತಿಸಲಾಯಿತು. ಮಹಜರ್ ಕಾಲಕ್ಕೆ ಇಬ್ಬರು ಪಂಚರು ಇದ್ದರು. ಅವರ ಹೆಸರು ಗೊತ್ತಿಲ್ಲ.

**<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎನ್ ಐ ಜಿ ವಕೀಲರಿಂದಃ</u>**

5. ನಮ್ಮ ಮನೆಯಿಂದ ಮೃತನ ಮನೆ ನೂರು ಮೀಟರ್ ದೂರದಲ್ಲಿದೆ. ಆತ ನನಗೆ ವಾರಕ್ಕೆ ಒಂದೆರಡು ಸಾರಿ ಭೇಟಿಯಾಗುತ್ತಿದ್ದ. ದಿಃ24.05.2017 ರಂದು ತಾನು ಆ ದಿನ ಗಾರ್ಡನ್ ಕೆಲಸಕ್ಕೆ ಹೋಗುತ್ತಿರುವುದಾಗಿ ಮೃತನು ಹೇಳಿದ್ದ. ಯಾರೊಂದಿಗೆ ಮತ್ತು ಎಲ್ಲಿ ಎಂದು ಹೇಳಿರಲಿಲ್ಲ. ಫ್ರಾಸಾ-2 ಹೇಳಿದ ಮೇಲೆ ನನಗೆ ಘಟನೆಯ ಬಗ್ಗೆ ಗೊತ್ತು. ದಿಃ24.05.2017 ರಂದು ಜತ್ತಿ ದ್ವಾರಕಮಯಿ ವಿಲ್ಲಾದ ಸೆಕ್ಯೂರಿಟಿ ಪಾಯಿಂಟ್ ಹತ್ತಿರ ಹೋಗಿದ್ದೆ. ಅವರು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆಂದು ಹೇಳಿದ್ದರಿಂದ ವಿಲ್ಲಾ ಲೇಔಟ್ ಗಳ ಒಳಗೆ ಹೋಗಲಿಲ್ಲ. ನಿಪಿ-1 ನ್ನು ನನ್ನ ಸ್ನೇಹಿತನಾದ ವಕೀಲ ರಾಘು ಎಂಬುವವರ ಹಸ್ತಾಕ್ಷರದಲ್ಲಿದೆ. ನಾನು ಮತ್ತು ಫ್ರಾಸಾ-2 ಇಬ್ಬರು ಸೇರಿ ಆತನಿಗೆ ಫಿರ್ಯಾದಿ ಬರೆಯಲು ಮಾಹಿತಿ ನೀಡಿದ್ದೇವೆ. ದಿಃ24.05.2017 ರಂದು 1 ನೇ ಆರೋಪಿಯನ್ನು ಆಸ್ಪತ್ರೆಯಲ್ಲಿ ನೋಡಿದ್ದೆ. ದಿಃ25.05.2017 ರಂದು ಘಟನಾ ಸ್ಥಳದಲ್ಲಿ ಅವರನ್ನು ನೋಡಿದ್ದೆ. ಫ್ರಾಸಾ-2 ನನಗೆ ಯಾವುದೇ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಹೇಳಿರುವ ಸಂಗತಿಯನ್ನು ನಾನು ಕಲ್ಪಿಸಿಕೊಂಡು ನೀಡಿದ್ದೇನೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರು 1 ನೇ ಆರೋಪಿಯ ಕೆಳಗೆ ಕಾಂಟ್ರಕ್ಟ್ ಮೇಲೆ ಕೆಲಸ ಮಾಡುತ್ತಾರೆ ಎಂಬ ವಿಚಾರ ಹೇಗೆ ಗೊತ್ತಾಯಿತು ಎಂದರೆ ಸಾಕ್ಷಿದಾರರು ಆರೋಪಿ ಮುರುಳಿ ಈತ ಹೇಳಿದ ಮೇರೆಗೆ ನನಗೆ ಗೊತ್ತಾಯಿತು ಎನ್ನುತ್ತಾರೆ. ದಿಃ25.05.2017 ರಂದು ನಾನು ಘಟನಾ ಸ್ಥಳಕ್ಕೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-2 ಕ್ಕೆ ನಾನು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಸ್ ಎನ್ ವಕೀಲರಿಂದಃ</u>**

6. ಮೃತ ಮತ್ತು ರಾಜು ಇಬ್ಬರು ತಾವು ಗಾರ್ಡನ್ ಕೆಲಸಕ್ಕೆ ಹೋಗುತ್ತಿರುವುದಾಗಿ ನನಗೆ ಹೇಳಿದಾಗ ಸಮಯ ಬೆಳಗ್ಗೆ ಸುಮಾರು 08.30 ಆಗಿತ್ತು. ನಾನು ಆಸ್ಪತ್ರೆಯ ಹತ್ತಿರ ಹೋದಾಗ ಸಮಯ ಸಂಜೆ ಸುಮಾರು 06.45 ಘಂಟೆ ಆಗಿತ್ತು. ಆಗ ಮೃತ ಮತ್ತು ಪ್ರಾಸಾ-3 ಇಬ್ಬರು ಪ್ರಜ್ಞಾಹೀನರಾಗಿದ್ದರು. 3-4 ದಿವಸಕ್ಕೆ ಪ್ರಾಸಾ-3 ಈತನಿಗೆ ಮೊದಲು ಪ್ರಜ್ಞೆ ಬಂತು. ಘಟನೆಯಾದ 5-6 ದಿವಸಕ್ಕೆ ಮೃತನಿಗೂ ಸಹ ಪ್ರಜ್ಞೆ ಬಂತು. ಆದಾದ ಒಂದು ವಾರದಲ್ಲಿ ಆತ ತೀರಿಕೊಂಡ. ಪೃಥ್ವಿರಾಜ್ ಗೆ ಪ್ರಜ್ಞೆ ಬಂದಾಗ ವೈದ್ಯರು ಆತ ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾನೆ ಎಂದು ಹೇಳಿದ್ದರು ಎಂದರೆ ಸರಿ. ಮೃತ ಪೃಥ್ವಿರಾಜ್ ಆಗಲೀ ಅಥವಾ ರಾಜುವಾಗಲೀ ದಿಃ24.05.2017 ರ ಬೆಳಗ್ಗೆ ನನಗೆ ಸಿಕ್ಕಿರಲಿಲ್ಲ ಮತ್ತು ತಾವು ಗಾರ್ಡನ್ ಕೆಲಸಕ್ಕೆ ಹೋಗುತ್ತಿರುವುದಾಗಿ ಹೇಳಿಲ್ಲ ಎಂದರೆ ಸರಿಯಲ್ಲ. ಮೃತ ಪೃಥ್ವಿರಾಜ್ ಮತ್ತು ಪ್ರಾಸಾ-3 ಇವರ ಹುಡುಗಾಟದಿಂದ ಈ ಅವಘಡ ಆಗಿದೆ ಎಂದು ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ಆರೋಪಿತರ ವಿರುದ್ಧ ಸುಳ್ಳು ಫಿರ್ಯಾದಿ ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. (ಉಳಿದಂತೆ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸುತ್ತಾರೆ).

ಮರುವಿಚಾರಣೆಃ ಇಲ್ಲ

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು